# ಅಗೋಚರ

ವಿಜಯಲಕ್ಷ್ಮಿ ಕೆ.ಎಂ.



ಸಂಗ್ರಹಗೊಳ್ಳುತ್ತಾ ಬಂದ, ಸಂಕಲಿತವಾಗುತ್ತಾ ಹೋದ, ಕಣಕಣದ ನಿರಾಶೆಯೇ ಕೋಪಕ್ಕೆ ಪರಿವರ್ತಿತವಾಗಿ ಮೇಲೆಬ್ಬಿಸಿದ ಜ್ವಾಲೆಯೋ, ಅಂತರಂಗದ ಅಹಂಕಾರವೋ ಅಥವಾ ಯಾರೋ ಅವನೊಳಗೆ ನುಗ್ಗಿ ದನಿಯಾಗಿ, ಅವನ ಗಂಟಲಿನಿಂದ ಹೊರಡಿಸಿದ್ದೋ, ಯಾವುದಕ್ಕೆಂದು ಸ್ಪಷ್ಟಗೊಳ್ಳದೆಯೂ ಹೊರ ಹಾರಿದ ಅಸಹನೆಯೋ, ಅಂತೂ ಆ ಎರಡು ಪದಗಳನ್ನು ವೇದಿಕೆಯ ಮೇಲೆ ಬಳಸಿ ಬಿಟ್ಟಿದ್ದ ಸತೀಶ ಅಂದು. ಹಿಂದು ಮುಂದಿನ ಆಲೋಚನೆಯೂ ಮಾಡದೇ, ವೇದಿಕೆಯಿಂದ ಕೆಳಗಿಳಿದ ಮೇಲೂ ಆ ಕೋಪ, ದರ್ಪ, ಅಸಹನೆಗಳ ಒಟ್ಟು ಮೊತ್ತ ಕ್ರಮೇಣ ಕರಗುವಷ್ಟು ಸಮಯದವರೆಗೂ ತನ್ನ ಆ ಮಾತು ಸರಿ ಎಂದೇ ಅನಿಸಿತ್ತು ಅವನಿಗೆ. ಆದರೆ ಆ ಪದ ಬಳಕೆ ತನ್ನ ವ್ಯಕ್ತಿತ್ವವನ್ನೇ, ವರ್ಚಸ್ಸನ್ನೇ, ಗೌರವವನ್ನೇ ನಾಶ ಮಾಡುವಂಥದೆಂದು ಅರಿವಾದ ದಿನದಿಂದ ಅವನ ನಡವಳಿಕೆಯೇ ಬದಲಾಯಿತು. ನಿಜವೆಂದರೆ ಅದು ಅವನ ಜ್ಞಾನೋದಯಕ್ಕೆ ಕಾರಣವಾದ ಘಟನೆ. ಆ ಪದಗಳನ್ನು ಬಳಸಿದ್ದು ತಾನಲ್ಲವೇ ಅಲ್ಲ ಎಂಬ ಅನಿಸಿಕೆ.

ಸತೀಶ ಅತ್ಯಾಸಕ್ತಿಯಿಂದ, ಅಂದು ಆ ಒಂದು ಗೌರವದ ಕ್ಷಣಕ್ಕಾಗಿ ಕಾದಿದ್ದ. ತನ್ನ ಮಾತುಗಳನ್ನು ಜೇನಿನಲ್ಲಿ ಅದ್ದಿ, ಮಾಹಿತಿಯ ತುಪ್ಪ ಸವರಿ ಸಭಿಕರ ಮುಂದಿಡಲು ತಯಾರಿ ನಡೆಸಿದ್ದ. ವೇದಿಕೆಯ ನಿರ್ಮಾಣಕ್ಕೆ, ಪುಸ್ತಕಗಳ ಪ್ರದರ್ಶನಕ್ಕೆ, ಸತೀಶನ ಕೈ ಸೇರಿತ್ತು. ಕಾರ್ಯಕ್ರಮದ ವಿವರಗಳ ಕರಡು ರಚನೆಯಲ್ಲಿ ಸತೀಶನ ತಲೆ ಇತ್ತು. ಪೆಂಡಾಲು ಕಟ್ಟಿಸಲು ಸತೀಶನ ಓಡಾಟದ ಶ್ರಮವಿತ್ತು. ಗಣ್ಯರನ್ನು ಕರೆ ತರುವುದಕ್ಕೆ ಸತೀಶನ ಕಾರು ಓಡಿತ್ತು. ಎಲ್ಲ ಅಂದರೆ ಎಲ್ಲಾ ಕಾರ್ಯಗಳಲ್ಲೂ ಅವನ ಸರ್ವ ಶಕ್ತಿಗಳ ವಿವಿಧ ಬಲವಿತ್ತು.

ಆದರೆ ಪರಿಚಿತರು ಆತ್ಮೀಯರಷ್ಟೇ ಸೇರಿದ ಆ ಸಣ್ಣ ಕಾರ್ಯಕ್ರಮದ ದಿನ ಆರಂಭಕ್ಕೆ ಅರ್ಧ ಗಂಟೆ ಮುನ್ನವಷ್ಟೇ ಅವನ ಅರಿವಿಗೆ ಬಂದಿದ್ದು, ಆ ಕಾರ್ಯಕ್ರಮಕ್ಕೆ ಸಂಬಂಧಿಸಿದ, ಐದು ಪುಟಗಳಷ್ಟು ಉದ್ದದ ಆಹ್ವಾನ ಪತ್ರಿಕೆಯ ಯಾವ ಮೂಲೆಯಲ್ಲೂ ಅವನ ಹೆಸರಿಲ್ಲ. ವೇದಿಕೆಯ ಮೇಲಾಗಲೀ, ಪ್ರೇಕ್ಷಕರ ಸಾಲಿನಲ್ಲಾಗಲೀ ಅವನಿಗೆ ಕುಳಿತುಕೊಳ್ಳಲು ಕುರ್ಚಿ ಇಲ್ಲ. ಕಸ ಗುಡಿಸುವವರಿಂದ ಹಿಡಿದು, ಮುಖ್ಯ ಅತಿಥಿಗಳವರೆಗೆ ಸಲ್ಲಿಸಲಾದ ವಂದನಾರ್ಪಣೆಯ ಪಟ್ಟಿಯಲ್ಲಿಯೂ ಅವನಿಗೆ ಗೌರವ ಸಲ್ಲಿಸಲಾಗುತ್ತಿಲ್ಲ. ಅದೇನು ಕಾರಣವೋ, ಸಾರ್ವಜನಿಕರೆದುರು ಅವನಿಗೂ, ಅವನ ಶ್ರಮ ಹಾಗೂ ಧನ ದಾನಕ್ಕೂ ಮರೆವಿನ ಪರದೆ ಹೊದಿಸಲಾಗುತ್ತಿದೆ ಎಂಬುದು ಅರಿವಿಗೆ ಬಂದಿತ್ತು. ಅಂಥ ಅದ್ದೂರಿ ಕಾರ್ಯಕ್ರಮದ ಎಲ್ಲ ವ್ಯವಸ್ಥೆಯನ್ನೂ ಸತ್ಯಣ್ಣನೊಬ್ಬನೇ ಮಾಡಿದ್ದು ಎಂಬಂತೆ ಸತ್ಯಣ್ಣ ಮಿಂಚಿದ್ದ.

ಆ ಸಂಜೆಯೇ ನಡೆದ, ಸತ್ಯಣ್ಣನೇ ಮುಖ್ಯಸ್ಥನಾದ ಇನ್ನೊಂದು ಕಾರ್ಯಕ್ರಮದ ಸಂದರ್ಭದಲ್ಲೇ ಇರಬೇಕು, ಸತೀಶನ ಹಿಂದೆಯೇ ಎಲ್ಲೋ ಮೂಲೆಯಲ್ಲಿ, ಮಾಯೆಯಲ್ಲಿ ಕದ್ದು ಸೇರಿಕೊಂಡ ಅಪರಿಚಿತನೊಬ್ಬ ಛಟ್ಟನೆ ನುಸುಳಿ ಹೊರಬಂದು ವೇದಿಕೆ ಹತ್ತಿ, ಸತೀಶನೇ ತಾನಾಗಿ, ಬೇಡದ ಎರಡು ನಿಂದನೆಯ ಪದಗಳನ್ನು ಬಳಸಿ, ಎಲ್ಲೋ ದೂರಕ್ಕೆ ಓಡಿದ್ದ. ಅವನಾಡಿದ ಮಾತನ್ನು ಸರಿ ಎಂದೇ, ಒಂದು ವಾರ ಕಾಲ ಸಮರ್ಥಿಸಿ, ಸತೀಶನ ಮನೆಯಿಂದ ಯಾವಾಗಲೋ ತಪ್ಪಿಸಿಕೊಂಡಿದ್ದ. ಸತೀಶ ತನ್ನ ಮನದೊಳಗೆ ಒಂದು ವಾರದಿಂದ ಸಿದ್ಧಪಡಿಸಿಕೊಂಡ ಭಾಷಣದಲ್ಲಿಯೂ, ವೇದಿಕೆ ಹತ್ತುವ ಸಮಯದಲ್ಲಿಯೂ, ಆ ಮಾತುಗಳಾಗಲೀ, ಅಂತಹದೊಂದು ಕುಪಿತ ಮನಸ್ಸಿನ ವ್ಯಂಗ್ಯವಾಗಲೀ ಇರಲೇ ಇಲ್ಲ. ಸತ್ಯಣ್ಣನ ಹುನ್ನಾರದ ಕುರಿತು, ಸತೀಶನಿಗೆ ಲವಲೇಶ ಅನುಮಾನವೂ ಇದ್ದಿರಲಿಲ್ಲ, ಅಸಮಾಧಾನವೂ ಹುಟ್ಟಿರಲಿಲ್ಲ ಆವರೆಗೆ. ಆದರೆ ಇವೆಲ್ಲ ಆ ನಂತರ ಹುಟ್ಟಿದ್ದು, ಕಣ್ಣಿಗೆ ಬೀಳದೇ ಮೊದಲೂ ಒಮ್ಮೆ ಇಂಥದೊಂದು ಎಡವಟ್ಟನ್ನು ಮಾಡಿ ಮರೆಯಾಗಿದ್ದ, ಆ ಅಪರಿಚಿತ ವ್ಯಕ್ತಿ.

ಅವನು ಯಾರೋ ಸತೀಶನಿಗೆ ತಿಳಿಯದು. ಆದರೆ ಅಂದು ಬೇಡದ ಎರಡು ಮಾತಾಡಿದ ಆ ಮಾಯಾವ್ಯಕ್ತಿ, ಇವನ ಮನದೊಳಗೆ ಸಣ್ಣದೊಂದು ಕೊರಗು ಮತ್ತು ಜ್ಞಾನದ ಬೀಜವನ್ನು ಬಿತ್ತಿ ಹೋಗಿದ್ದ. ಯಾರಿರಬಹುದು ಅವನು? ಅವನಿಗಾಗಿ ಸತೀಶನ ಹುಡುಕಾಟ ಆರಂಭಗೊಂಡಿತು.

ಸತೀಶ ಕನ್ನಡದ ಒಬ್ಬ ಉತ್ತಮ ಹೆಸರಾಂತ ನಟ. ಅಬ್ಬರ, ಗಲಾಟೆಗಳಿಲ್ಲದ ಉತ್ತಮ ಮುಖಭಾವದ ಮಾತುಗಳಿಂದಲೇ ಪ್ರೇಕ್ಷಕರ ಮನಸ್ಸನ್ನು ಗೆದ್ದವನು.

ಕತ್ತಲ ಕೋಣೆಯಲ್ಲಿ ಸಣ್ಣ ದೀಪದ ಬೆಳಕಿನಲ್ಲಿ, ಶಾಂತಚಿತ್ತದಲ್ಲಿ ತಾನು ಕುಳಿತಿದ್ದೇನೆಂಬ ಅನಿಸಿಕೆಯಲ್ಲಿ, ದಿನೇ ದಿನೇ ಧ್ಯಾನಸ್ಥನಾಗತೊಡಗಿದ ಸತೀಶ, ಅಗೋಚರನ ತೆಕ್ಕೆಯೊಳಗೆ ಆನಂದಿಸುತ್ತ, ಸಮಾಧಾನದ ಕುಟೀರವನ್ನು ಪ್ರವೇಶಿಸಿದ್ದ.